# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ, ಇವರಿಗೆ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100 ಸೀಟುಗಳಿಗೆ ಹೆಚ್ಚಿಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಆಕುಕ 253 ಪಿಟಿಡಿ 2017, ದಿನಾಂಕ:22.09.2017
2. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಪ್ರಸ್ತಾವನೆ ಸಂಖ್ಯೆ:RGUHS/ACA/AFF/AY-72/2022-23, ದಿನಾಂಕ:25.11.2022.
3. ಸರ್ಕಾರದ ನಿರಾಕ್ಷೇಪಣಾ ಪತ್ರ ಸಂಖ್ಯೆ:346 ಪಿಐಎಂ 2022, ದಿನಾಂಕ:30.11.2022.
4. NCISM ಇವರ ಅನುಮತಿ ಪತ್ರ ಸಂಖ್ಯೆ: 4-155/ MARB/2023-AY, ದಿನಾಂಕ:21.09.2023.
5. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/19/ವೈಶಿ(2)/2021-22, ದಿನಾಂಕ:08.02.2023.

* * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ.(1)ರಲ್ಲಿ ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ ಸಂಸ್ಥೆಗೆ ಹೊಸದಾಗಿ BAMS ಪದವಿ ಕೋರ್ಸ್‌ನ್ನು 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2)ರಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ ಇವರಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100 ಸೀಟುಗಳಿಗೆ ಹೆಚ್ಚಿಸಲು ನಮೂನೆ-5 ರಲ್ಲಿ Consent of Affiliation ಅನ್ನು ನೀಡಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರಲ್ಲಿ ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ ಇವರಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100 ಸೀಟುಗಳಿಗೆ ಹೆಚ್ಚಿಸಲು ಅನುಮತಿ ನೀಡಿ ನಮೂನೆ-4 ಅನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(4)ರಲ್ಲಿ NCISM ಸಂಸ್ಥೆಯು 2023-24ನೇ ಶೈಕ್ಷಣಿಕ ಸಾಲಿನಿಂದ ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ ಇವರಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100 ಸೀಟುಗಳಿಗೆ ಹೆಚ್ಚಿಸಲು ಷರತ್ತುಬದ್ಧ ಅನುಮತಿ ನೀಡಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(5)ರಲ್ಲಿ ಆಯುಕ್ತರು, ಆಯುಷ್ ಇಲಾಖೆ ಇವರು ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ ಇವರಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಿ ಪದವಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆಯುಕ್ತರು, ಆಯುಷ್ ಇಲಾಖೆ ಇವರ ವರದಿ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸಂಕೇಶ್ವರ ಇವರಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಲು ಅನುಮತಿ ನೀಡಲು ನಿರ್ಧರಿಸಿದೆ. ಆದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 346 ಪಿಐಎಂ 2023,**
**ಬೆಂಗಳೂರು. ದಿನಾಂಕ:26.09.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಹಳೇ ಪಿ.ಬಿ.ರಸ್ತೆ, ಸಿರಿಯನ್ ಆಸ್ಪತ್ರೆ ಹಿಂಭಾಗ, ಸಂಕೇಶ್ವರ, ಬೆಳಗಾವಿ ಜಿಲ್ಲೆ-591313, ಇವರಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ BAMS ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮತಿ ನೀಡಿದೆ.

**ಮುಂದುವರೆದಂತೆ, ಸದರಿ ಸಂಸ್ಥೆಯು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು:**

1. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
2. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮ/ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು ಮತ್ತು ಸರ್ಕಾರಿ ಕೋಟಾ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
3. NCISM ಸಂಸ್ಥೆಯು ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
5. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
6. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.
7. ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಕೋರ್ಸ್‌ನ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಸೀಟುಗಳಲ್ಲಿ ಕಾಲಕಾಲಕ್ಕೆ ಸರ್ಕಾರವು ನಿಗದಿಪಡಿಸುವ ಅನುಪಾತದಲ್ಲಿ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
8. ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಆಯುಕ್ತರು, ಆಯುಷ್ ಇಲಾಖೆ, ಇವರು, ಖಚಿತಪಡಿಸಿಕೊಳ್ಳುವುದು.
9. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

S R Goravar
26/9/23

**(ಶೈಲಾ ಆರ್ ಗೊರವರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಭಾವೈಪ ಮತ್ತು ಸಮನ್ವಯ)

**ಇವರಿಗೆ:**

1. The Chair Person, National Commission for Indian System of Medicine, Ministry of Ayush Government of India, No.61- 65, Institutional area, Janakapuri-D Block, New Delhi-110 058.

---3

21

2. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು
3. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಬ್ಲಾಕ್, ಜಯನಗರ, ಬೆಂಗಳೂರು-41.
4. ಪ್ರಾಂಶುಪಾಲರು, ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆಯ ಕೃಷ್ಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಹಳೇ ಪಿ.ಬಿ.ರಸ್ತೆ, ಸಿರಿಯನ್ ಆಸ್ಪತ್ರೆ ಹಿಂಭಾಗ, ಸಂಕೇಶ್ವರ, ಬೆಳಗಾವಿ ಜಿಲ್ಲೆ-591313,
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ ವಿಕಾಸ ಸೌಧ, ಬೆಂಗಳೂರು.

2. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕ ವಿಕಾಸ ಸೌಧ, ಬೆಂಗಳೂರು.